ಮೈಸೂರ ಗೆಜೆಟ್.

ಸಂ. 42.] ಸರ್ಕಾರದಿಂದ ಪ್ರಾಯುಷ್ ಆದ್ದ. [ನಂ. 13.

ಬೆಂಗಳೂರು, ಗುರುವಾರ, ಮಾರ್ಚಿ ತಾ॥ 28, ಸ್ಯ 1907.

II ನೆ ಭಾಗ

ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ಮತ್ತೆ ರಿಜಿಸ್ಟ್ರಿಂದ ಕೊಡೋಣಾದ ಇತ್ತೀಚಿನ ನಾಮಗಳು.

ಫಾರೆಸ್ಟ್ ಇಲಾಖೆ.

ತಾರೀಖು 20ನೆ ಮಾರ್ಚಿ 1907.

ಕಳ್ಳಂಬನ ಕುಮರಿ, ಮೈಸೂರು ಡಿಸ್ಟ್ರಿಕ್ಟು.

ಸ್ಯ 1900ನೆ ಇಸವಿಯ XIನೆ ನಂಬರಿ ಫಾರೆಸ್ಟ್ ರಗ್ಯುಲೇಷನ್ 5ನೆ ಸೆಕ್ಷನ್ ಪ್ರಕಾರ ಪ್ರಸಿದ್ಧಪಡಿಸುವದೇನಂದರೆ,—4ನೆ ಸೆಕ್ಷನ್ ಪ್ರಕಾರ ಇದರಡೀ ಕಂಡ ಷೆಡ್ಯೂಲಿನಲ್ಲಿ ಗವರ್ನ್‌ಮೆಂಟಿನಿಂದ ವಿವರಿಸಲ್ಪಟ್ಟ ಚಕ್ಕುಬಂದಿಯುಳ್ಳ ಪ್ರದೇಶವು ನಂಬರು R. 16480–Ft. 205–05–2, 28—6—06; 5—7—06ನೆ ಇಸವಿಯ ಗೆಜೆಟಿನಲ್ಲಿ ಫಾಮಿಷ್ಮಾಡಲ್ಪಟ್ಟಿರುತ್ತೆ :—

ಷೆಡ್ಯೂಲ್.

ತಾಲ್ಲೂಕು, ಹೋಬಳಿ, ಗ್ರಾಮ.	ಅಂದಾಜು ವಿಸ್ತೀರ್ಣ.	ಇತರರ ಹೆಸರು.	ಸ್ಥಳ ಚಕ್ಕುಬಂದಿ.
ಮೈಸೂರು. ಹುಣಸೂರು ತಾಲ್ಲೂಕು, ಹರಣಹಳ್ಳಿ ಹೋಬಳಿ.	ಗಂಟೆ. ಎಕರೆ. 32 678	ಕಳ್ಳಂಬನ ಕುಮರಿ.	ಸ್ಥಳ—ದೊಡ್ಡ ಹರವೆ ಸ್ಟೇಟ್ ಫಾರೆಸ್ಟಿನ ಪೂರ್ವ ಸರಹದ್ದನ್ನಿಸುವ ಕೆಂಬೋರೆಹಳ್ಳದ ಮೇಲೆ ಇರುತ್ತದೆ. ಮತ್ತು ಮೈಸೂರು ಡಿಸ್ಟ್ರಿಕ್ಟು ಹುಣಸೂರು ತಾಲ್ಲೂಕು ಪೆರಿಯಾಪಟ್ಟಣ-ಫ್ರೇಜರ್‌ಪೇಟೆ ಹೈರೋಡ್ ಮೇಲಿರುವ ಕೊಪ್ಪ ಗ್ರಾಮಕ್ಕೆ ನೈರುತ್ಯ ದಿಕ್ಕಿಗೆ ಸುಮಾರು ಒಂದು ಮೈಲಿ ದೂರದಲ್ಲಿರುತ್ತದೆ. ಉತ್ತರಕ್ಕೆ—ಕೆಂಬೋರೆಹಳ್ಳದ ಮೇಲಿರುವ ದೊಡ್ಡ ಹರವೆ ಫಾರೆಸ್ಟಿನ ಸರಹದ್ದು ಕಲ್ಲಿನ ವಾಯವ್ಯ ಮೂಲೆಯಿಂದ ಹೊರಟು ಲೈನ್ ಈಶಾನ್ಯ ದಿಕ್ಕಿಗೆ ಮೇಲೆ ಹೇಳಲ್ಪಟ್ಟ ನದಿಯನ್ನನುಸರಿಸಿ, ಸದರಿ ನದಿಯು ಜೋಡಹಳ್ಳವನ್ನು ಸೇರುವ ಜಾಗಕ್ಕೆ ಕಳ್ಳಂಬನ ಕುಮರಿ ಗ್ರಾಮದ 38ನೆ ಸರ್ವ ನಂಬರ ಉತ್ತರ ದಿಕ್ಕಿನ ಕೊನೇ ಭಾಗದಲ್ಲಿ ಸೇರುತ್ತದೆ. ಪೂರ್ವಕ್ಕೆ—ಅಲ್ಲಿಂದ ಹೊರಟು ಕಳ್ಳಂಬನಕುಮರಿ, ಅರಕಳುಮರಿ ಮತ್ತು ಲಕ್ಕಿಪುರ ಗ್ರಾಮಗಳು ಸೇರುವ ಜೋಡಹಳ್ಳಕ್ಕೆ ಹೋಗುತ್ತದೆ. ದಕ್ಷಿಣಕ್ಕೆ—ಅಲ್ಲಿಂದ ಸದರಿ ಲೈನ್ ಅರಳಿ ಕುಮರಿ ಗ್ರಾಮದ ಉತ್ತರ ಸರಹದ್ದನ್ನು ಅನುಸರಿಸಿ, ಅರಕಳುಮರಿ, ಕಾಳಂಬನ ಕುಮರಿ ಗ್ರಾಮಗಳ ಮತ್ತು ದೊಡ್ಡಹರವೆ ಸ್ಟೇಟ್ ಫಾರೆಸ್ಟು ಇವು ಮೂರು ಸೇರುವ ಕೆಂಬೋರೆ ಹಳ್ಳಕ್ಕೆ ಹೋಗುತ್ತದೆ. ಪಶ್ಚಿಮಕ್ಕೆ—ಅಲ್ಲಿಂದ ಮೇಲ್ಕಂಡ ಕೆಂಬೋರೆಹಳ್ಳವನ್ನು ತಟ್ಟುವದು ಹೊರಬ ಸ್ಥಳಕ್ಕೆ ಸೇರುತ್ತದೆ.

2. ಸದರಿ ಜಂಗಲಿಯನ್ನು ಸ್ಟೇಟ್ ಫಾರೆಸ್ಟು ಮಾಡುವದಕ್ಕೆ ಮುಂಚೆ ಇಸ್ತಿಹ್ತಾರು ಪ್ರಸಿದ್ಧಪಡಿಸಿದ ತಾರೀಖಿಗೂ ಮತ್ತು ಪ್ರಸಿದ್ಧಪತ್ರಿಕೆ ಫಾಯಿಷ್ ಆಗುವದಕ್ಕೂ ಮಧ್ಯಕಾಲದಲ್ಲಿ ಸದರಿ ಇಸ್ತಿಹಾರ್ನಾಮದಲ್ಲಿ ನಮೂದಿಸಿರುವ ಜಮೀನುಗಳ ಮೇಲೆ, ಅಥವಾ ಜಮೀನಿನಲ್ಲಿ ವಾರಸೀಹಕ್ಕಿ ನಿಂದಾಗಲಿ ಅಥವಾ ಸರ್ಕಾರದಿಂದ ಅಥವಾ ಸದರೀ ಪ್ರಸಿದ್ಧಪತ್ರಿಕೆ ಫಾಯಿಷ್ಮಾಡಿದಾಗ ಇಂಥಾ ಹಕ್ಕುಗಳನ್ನುಂಟುಮಾಡುವದಕ್ಕೆ ಅಧಿಕಾರವನ್ನು ಪಡೆಸಿದ ಮನುಷ್ಯನಿಂದಲಾಗಲಿ ಬಂದ ಹಕ್ಕುಗಳ ವಿನಹಾ ಇತರ ಯಾವ ತರಹವಾದ ಹಕ್ಕು ಬಾಧ್ಯತೆಗಳು ಹುಟ್ಟಲಾರವು. ಸದರೀ ಜಮೀನಿನಲ್ಲಿ ಹೊಸ ಮನೆಯನ್ನು ಕಟ್ಟಕೂಡದು, ಪ್ಲಾಂಟೇಷನ್ ಮಾಡಕೂಡದು, ಸಾಗುವಳೀಗೋಸ್ಕರವಾಗಲಿ, ಇನ್ಯಾವದಕ್ಕೋಸ್ಕರವಾಗಲೀ ಹೊಸದಾಗಿ ಕತರಾವಣಿ ಮಾಡಕೂಡದು. ರೆಗ್ಯುಲೇಷನ್ನಿನಲ್ಲಿ ವಿಧಾಯಕವಾದ ಪ್ರಕಾರವಲ್ಲದೆ ವ್ಯಾಪಾರ ಅಥವಾ ಸಾಮಾನು ತಯಾರಿಗೋಸ್ಕರ ಗಿಡಗಳ್ಳಾವದನ್ನೂ ಕಡಿಯಕೂಡದು, ಸದರಿ ಜಮೀನಿನಲ್ಲಿ ಮುಂಚಿತವಾಗಿ ಸರ್ಕಾರದಿಂದ ಅಪ್ಪಣೆ ಪಡಿಯದೇನೆ ಇಂಥಾ ಜಮೀನು ವಿಷಯದಲ್ಲಿ ಹಿಡುವಳೀ ಹಕ್ಕನ್ನುಂಟುಮಾಡಕೂಡದು. ಮತ್ತು ಅಂಥಾ ಅಪ್ಪಣೇ ಇಲ್ಲದೆ ಕೊಟ್ಟ ಹಿಡುವಳೀ ಹಕ್ಕು ಅಸಿದ್ಧವಾಗಿರುವದು.

3. ಸದರೀ ಜಮೀನು ಸ್ಟೇಟ್ ಫಾರೆಸ್ಟು ಮಾಡಿದ ತರುವಾಯ, ಅದರಲ್ಲಿ,

(a) ಅತಿಕ್ರಮ ಪ್ರವೇಶ, ದನ ಕರುಗಳನ್ನು ಮೇಯಿಸುವದು; ದನ ಕರುಗಳನ್ನು ಸ್ಟೇಟ್ ಫಾರೆಸ್ಟಿನಲ್ಲಿ ಹೋಗಲು ಆಸ್ಪದ ಕೊಡುವದು.

(b) ಯಾವ ಗಿಡವನ್ನಾದರೂ ಕಡಿಯಕೂಡದು, ಅಥವಾ ಯಾವ ಮರಮುಟ್ಟುಗಳನ್ನು ಕತರಾಯಿಸುವದು ಅಥವಾ ಎಳೆಯುವದರಲ್ಲಿ ಅಸಡ್ಡೆಯಿಂದ ಯಾವ ನಷ್ಟವನ್ನಾದರೂ ಉಂಟುಮಾಡುವದು ಅಥವಾ ಯಾವ ಗಿಡದ್ದಾದರೂ, ಯಾವ ಪೊದೆದಾದರೂ ಬೆಂಕಿ ಅಥವಾ ಎಲೆಗಳನ್ನು ಕಿತ್ತುಹಾಕುವದು.

(c) ನೀರಿಗೆ ವಿಷ ಹಾಕುವದು, ನೀರಿನಲ್ಲಿ ಡೈನಾಮಿಟ್ ಸುಡುವದು, ಅಥವಾ ಸರ್ಕಾರದಿಂದ ಆಗಿರುವ ಯಾವದಾದರೂ ನಿಬಂಧನೆಗಳಿಗೆ ವಿರೋಧವಾಗಿ ಬೇಟೆ ಆಡುವದು, ಬಂದೂಕಿನಿಂದ ಸುಡುವದು, ಮಾನು ಹಿಡಿಯುವದು, ಅಥವಾ ಬೋನುಗಳನ್ನು ಬಲೆಗಳನ್ನು ಹಾಕುವದು, ಇಪ್ಪಗಳೆಲ್ಲಾ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪುತಗಳಾಗಿವೆ. ಮತ್ತು ಸದರೀ ಸ್ಟೇಟ್ ಫಾರೆಸ್ಟಿನಲ್ಲಿ ಇದರಿಂದ ಕಂಡ ಕೆಲಸಗಳನ್ನು ಮಾಡುವವರು ಆರು ತಿಂಗಳ ಸಜಾ ಅಥವಾ 500 ರೂಪಾಯಿಗಳ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಸ್ಥರಾಗಿರುತ್ತಾರೆ.

(a) 6ನೆ ಪ್ರಕರಣದಿಂದ ನಿರೋಧಿಸಿರುವ ಯಾವದಾದರೂ ಹೊಸ ಜಂಗಲಿ ಕತರಾವಣಿ.

(b) ಜಂಗಲಿಗೆ ಬೆಂಕಿ ಹಚ್ಚುವದು ಅಥವಾ ಸರ್ಕಾರದ ನಿಬಂಧನೆಗಳಿಗೆ ವಿರೋಧವಾಗಿ ಅಂಥಾ ಸ್ಟೇಟ್ ಫಾರೆಸ್ಟಿಗೆ ಬಾಧಕ ಉಂಟಾಗುವ ಹಾಗೆ ಬೆಂಕಿಯನ್ನು ಉರಿಸುವದು, ಅಥವಾ ಅಂಥಾ ಉಂಟುಮಾಡಿದ ಉರಿಯನ್ನು ಆರಿಸದೇ ಇರುವದು.

(c) ಈ ಬಗ್ಗೆಯಾಗಿ ಕ್ರಮವಾಗಿ ಅಧಿಕಾರ ಹೊಂದಿದ ಫಾರೆಸ್ಟು ಆಫೀಸರು ಆಗಿಂದಾಗ್ಗೆ ಪ್ರಕಟಿಸುವ ನಿಬಂಧನೆಗಳಿಗೆ ವಿರೋಧವಾಗಿ ವಿಧಿತವಾದ ಕಾಲ ಮತ್ತು ಕ್ರಮಗಳಲ್ಲದೆ, ಬೆಂಕಿಯನ್ನು ಹಚ್ಚುವದು, ಇಡುವದು, ಮತ್ತು ತೆಗದುಕೊಂಡು ಹೋಗುವದು.

(d) ಯಾವ ಗಿಡವನ್ನಾಗಲಿ ಕಡಿಯುವದು, (ಕಟ್ಟಾಯಿಸುವದು) ಅದರ ಮೈಯ್ಯ ಸುತ್ತಲೂ ಗಾಯ ಮಾಡುವದು, ಗುರ್ತು ಹಾಕುವದು, ಸವರುವದು, ತೂತು ಹಾಕುವದು, ಬೆಂಕಿಯಿಂದ ಅಥವಾ ಅನ್ಯಥಾ ಹಾನಿಗೊಳಿಸುವದು.

(e) ಬಂಡೆಯಿಂದ ಕಲ್ಲು ತೆಗೆಯುವದು, ಸುಣ್ಣ ಅಥವಾ ಇದ್ದಲು ಸುಡುವದು, ಅಥವಾ ಯಾವ ಫಾರೆಸ್ಟು ಉತ್ಪತ್ತಿಯನ್ನಾದರೂ ಜಮಾಯಿಸುವದು, ಯಾವದಾದರೂ ಸಾಮಾನು ತಯಾರೀ ಕೆಲಸಕ್ಕೆ ವಳಪಡಿಸುವದು ಅಥವಾ ಸಾಗಿಸುವದು.

(f) ಸಾಗುವಳೀಗಾಗಲೀ ಅಥವಾ ಇನ್ಯಾವ ಕೆಲಸಕ್ಕಾಗಲೀ ಯಾವ ಜಮೀನನ್ನಾಗಲೀ ಹಸನ ಮಾಡುವದು ಅಥವಾ ಉತ್ತುವದು.

4. ಈ ಪ್ರಸಿದ್ಧಪತ್ರಿಕೆ ಫಾಯಿಷ್ ಆಗುವ ತಾರೀಖುಲಾಗಾಯ್ತು ಮೂರು ತಿಂಗಳೊಳಗಾಗಿ ಅಂಥಾ ಸರಹದ್ದಿನೊಳಗಿರುವ ಯಾವ ಜಮೀನಿನಲ್ಲಿ ಅಥವಾ ಜಮೀನುಮೇಲಾದರೂ ಅಥವಾ ಅಂಥಾ ಜಮೀನಿನ ಫಾರೆಸ್ಟು ಉತ್ಪತ್ತಿಗಾಗಲೀ ಯಾರಿಗಾದರೂ ಹಕ್ಕು ಇದೆ ಅಥವಾ ಉಂಟು ಎಂತ ಹೇಳ್ಕುವದು, ಅಂಥಾ ಪ್ರತಿ ಬಂಧು ಹಕ್ಕಿನ ಸ್ವಭಾವವನ್ನು ಹಕ್ಕು ಎಷ್ಟರ ಮಟ್ಟಿಗೆ ಇದೆ ಯನ್ನುವ ತಕ್ಕಂಥಾ ವ್ಯಾಪ್ತಿಯನ್ನು ಸಮೂದು ಮಾಡಿ ಲಿಖಿತ ಮೂಲಕವಾಗಲೀ, ಅಥವಾ ರೂಬರೂ ಬಾಯ್ದಲೀ ತಿಳಿಯಪಡಿಸಬೇಕಲ್ಲದೆ, ಹಕ್ಕಿನ ದಾವೀಗೆ ಬಲೀಯವಾದ ದಸ್ತಾವೇಜುಗಳನ್ನು ಹಾಜರ್ಮಾಡಿಬೇಕು.

ತಾರೀಖು 20ನೆ ಮಾರ್ಚ್ 1907.

ಸ್ವರ್ಣಮುಖಿ ಫಾರೆಸ್ಟ್ಸ್, ಚಿತ್ರದುರ್ಗ ಡಿಸ್ಟ್ರಿಕ್ಟ್.

ಸನ್ 1900ನೆ ಇಸವಿಯ XIನೆ ನಂಬರ್ ಫಾರೆಸ್ಟ್ಸ್ ರೆಗ್ಯುಲೇಷನ್ 5ನೆ ಸೆಕ್ಷನ್ ಪ್ರಕಾರ ಪ್ರಸಿದ್ಧಪಡಿಸುವದೇನಂದರೆ, 4ನೆ ಸೆಕ್ಷನ್ ಪ್ರಕಾರ ಇದರಡಿ ಕಂಡ್ರ ಪೆಡ್ಯೂಲಿನಲ್ಲಿ ಗವರ್ನ್‌ಮೆಂಟಿನಿಂದ ವಿವರಿಸಲ್ಪಟ್ಟ ಜಕ್ಕಬ್ಬಂದಿಯುಳ್ಳ ಪ್ರದೇಶವು ನಂಬರು 15384—ಫಾಲೆಸ್ಟ್ಸ್ 195-05—3, ತಾರೀಖು 7—6—06ನೆ ಇನ್ನವಿಯು ಗೆಜೆಟ್ಟಿನಲ್ಲಿ ಘೋಷಿಸಲ್ಪಟ್ಟಿರುತ್ತೆ :—

ಪೆಡ್ಯೂಲಿಯೂ ಪಟ್ಟ.

ಡಿಸ್ಟ್ರಿಕ್ಟು.	ತಾಲ್ಲೂಕು.	ಸರ್ವೆ ನಂಬರುಗಳು.	ಬ್ಲಾಕಿನ ಹೆಸರು.	ಸ್ಥಳ ಮತ್ತು ಜಕ್ಕುಬಂದಿ.
ಚಿತ್ರದುರ್ಗ.	ಹಿರಿಯೂರು ತಾಲ್ಲೂಕು.	121 ಜಚೆರಿ ಪೈಸ್ಟ್.	ಪರ್ಣಾನುಬಿ ಸಾರೆಸ್ಟು.	ಸ್ಥಳ.—ತುಮಕೂರು ಡಿಸ್ಟ್ರಿಕ್ಟಿಗೆ ಸೇರಿದ ಬುಕ್ಕಪಟ್ಟಣ ಸ್ಟೇಟ್ ಫಾರೆಸ್ಟ್ಸಿಗೆ ಸಂಬಂಧಿಸಿರುವ ಹಿರಿಯೂರು ತಾಲ್ಲೂಕು ಆಗ್ನೇಯ ಮೂಲೆಯಲ್ಲಿದೆ. ಉತ್ತರಕ್ಕೆ :—ದಿಂಡಾರದ ಗ್ರಾಮದ ಸರ್ವೆ ನಂಬರು 40ರ ನೈರುತ್ಯ ಮೂಲೆಯಲ್ಲಿ ಹೊರಟು ಎಲ್ಲಿಯಗುರುತು ಸರ್ವೆ ನಂಬರು 40, 39, 36, 37, 35, 34, 27 ಮತ್ತು 26 ಇವುಗಳ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಹೋಗಿ ಆಜ್ಜೈರ್ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ; ತರುವಾಯ ಉತ್ತರ ಮಾರ್ಗವಾಗಿ ಸರ್ವೆ ನಂಬರು 26ರ ಪೂರ್ವ ಪಾರ್ಶ್ವವನ್ನೇ ಅನುಸರಿಸಿ ಸರ್ವೆ ನಂಬರು 16ರ ನೈರುತ್ಯ ಮೂಲೆಗೆ ಹೋಗುತ್ತದೆ; ತರುವಾಯ ಸರ್ವೆ ನಂಬರು 16ರ ದಕ್ಷಿಣ ಮತ್ತು ಪೂರ್ವ ಪಾರ್ಶ್ವಗಳನ್ನು ಅನುಸರಿಸಿ ಸರ್ವೆ ನಂಬರು 18ರ ನೈರುತ್ಯ ಮೂಲೆಗೆ ಹೋಗುತ್ತದೆ; ತರುವಾಯ ಸರ್ವೆ ನಂಬರು 18 ಮತ್ತು 17ರ ದಕ್ಷಿಣ ಪಾರ್ಶ್ವವನ್ನು ಅನುಸರಿಸಿ ಆಜ್ಜೈರ್ ಸರ್ವೆ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ; ತೆರುವಾಯ ಸರ್ವೆ ನಂಬರು 8ರಲ್ಲಿ ಹಾದು ಸರ್ವೆ ನಂಬರು 8ರ ಪೂರ್ವ ದಿಕ್ಕಿಗೆ ಹೋಗಿ ಸರ್ವೆ 155ನೆ ನಂಬರಿನ ಆಗ್ನೇಯ ಮೂಲೆಯಿಂದ ದಕ್ಷಿಣಕ್ಕೆ ಸುಮಾರು 1¾ ಫರಲಾಂಗಿನ್ತಲ್ಲಿ ಹೋಗುತ್ತದೆ; ತರುವಾಯ ಸರ್ವೆ ನಂಬರು 8ರ ಪೂರ್ವ ಪಾರ್ಶ್ವದ ಉದ್ದಕ್ಕೂ ಸರ್ವೆ ನಂಬರು 155ರ ಆಗ್ನೇಯ ಮೂಲೆಗೆ ಹೋಗುತ್ತದೆ; ತರುವಾಯ ಸರ್ವೆ ನಂಬರು 153, 152, 137 ಮತ್ತು 138ರ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಅದೇ ಗ್ರಾಮದ ಆಜ್ಜೈರು ನಂಬರಿನ ಆಗ್ನೇಯ ಮೂಲೆಗೆ ಸೇರುತ್ತದೆ. ಪೂರ್ವಕ್ಕೆ :—ತರುವಾಯ ವೋಬಳಾಪುರದ ಸರ್ವೆ ನಂಬರು 14 ಮತ್ತು 13ರ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಮಾವಿನ ಮಡು ಸರ್ವೆ ನಂಬರು 60ರ ವಾಯವ್ಯ ದಿಕ್ಕಿನ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂಬರು 78ರ ಮಧ್ಯೆ ಹೋಗಿ ಸದರಿ ಗ್ರಾಮದ ಸರ್ವೆ ನಂಬರು 79ರ ವಾಯವ್ಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂಬರು 79, 30 ಮತ್ತು 27ರ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಆಜ್ಜೈರ್ ನಂಬರಿನ ನೈರುತ್ಯ ಮೂಲೆಗೆ ಹೋಗುತ್ತದೆ; ತರುವಾಯ ಸರ್ವೆ ನಂಬರು 27 ಮತ್ತು 28ರ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಮತ್ತು ಸರ್ವೆ ನಂಬರು 25 ಮತ್ತು 24ರ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಆಜ್ಜೈರ್ ನಂಬರಿನ ನೈರುತ್ಯ ಮೂಲೆಗೆ ಹೋಗುತ್ತದೆ; ತರುವಾಯ ಸರ್ವೆ ನಂಬರು 24ರ ದಕ್ಷಿಣ ಪಾರ್ಶ್ವದ ಮತ್ತು ಸರ್ವೆ ನಂಬರು 24, 23 ಮತ್ತು 22ರ ಪೂರ್ವ ಪಾರ್ಶ್ವದ ಉದ್ದಕ್ಕೂ ಸರ್ವೆ ನಂಬರು 18ರ ಆಗ್ನೇಯ ಮೂಲೆಗೆ ಹೋಗುತ್ತದೆ; ತರುವಾಯ ಕಿಲಾರದಹಳ್ಳಿ ಸರ್ವೆ ನಂಬರು 23ರ ದಕ್ಷಿಣ ಪಾರ್ಶ್ವದ ಮತ್ತು ಸರ್ವೆ ನಂಬರು 23 ಮತ್ತು 27ರ ಪೂರ್ವ ಪಾರ್ಶ್ವದ ಉದ್ದಕ್ಕೂ ಆಜ್ಜೈರ್ ಸರ್ವೆ ನಂಬರು ಈಶಾನ್ಯ ಮೂಲೆಗೆ ಹೋಗುತ್ತದೆ; ತರುವಾಯ ಸರ್ವೆ ನಂಬರು 28ರಲ್ಲಿ ಹಾದು ಸರ್ವೆ ನಂಬರು 38ರ ಆಗ್ನೇಯ ಮೂಲೆಗೆ ಹೋಗುತ್ತದೆ; ತರುವಾಯ ಸರ್ವೆ ನಂಬರು 38ರ ಪೂರ್ವ ಪಾರ್ಶ್ವದ ಉದ್ದಕ್ಕೂ ಹೊರಟು ಅದರ ಈಶಾನ್ಯ ಮೂಲೆಗೆ ಹೋಗುತ್ತದೆ; ತರುವಾಯ ಸರ್ವೆ ನಂಬರು 29, 8 ಮತ್ತು 11 ಇವುಗಳ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಆಜ್ಜೈರು ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ. ತರುವಾಯ ಬುಕ್ಕಪಟ್ಟಣ ಫಾರೆಸ್ಟ್ಸ ಪಶ್ಚಿಮ ಗಡಿ ಮಾರ್ಗವಾಗಿ ಹೋಗುತ್ತದೆ. ದಕ್ಷಿಣಕ್ಕೆ :—ಬುಕ್ಕಪಟ್ಟಣ ಫಾರೆಸ್ಟ್ಸ ಮತ್ತು ಮಾರೇನಹಳ್ಳಿ ಗ್ರಾಮದ ಉತ್ತರ ಗಡಿ. ಪಶ್ಚಿಮಕ್ಕೆ :—ತರುವಾಯ ಮಾವಿನಮಡು ಗ್ರಾಮದ ಸರ್ವೆ ನಂಬರು 49 ಮತ್ತು 51ರ ಪೂರ್ವ ಪಾರ್ಶ್ವದ ಉದ್ದಕ್ಕೂ ಅದೇ ಗ್ರಾಮದ ಸರ್ವೆ ನಂಬರು 52ರ ಆಗ್ನೇಯ ಮೂಲೆಗೆ ಹೋಗುತ್ತದೆ, ತರುವಾಯ ಸರ್ವೆ ನಂಬರು 54ರ ದಕ್ಷಿಣ ಪಾರ್ಶ್ವವಾಗಿ ಅದರ ಆಗ್ನೇಯ ಮೂಲೆಗೂ ಮತ್ತು ಸರ್ವೆ ನಂಬರು 54 ಮತ್ತು 67ರ ಪೂರ್ವ ಪಾರ್ಶ್ವದ ಉದ್ದಕ್ಕೂ ಸರ್ವೆ ನಂಬರು 65ರ ನೈರುತ್ಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂಬರು 65 ಮತ್ತು 64ರ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಸರ್ವೆ ನಂಬರು 64ರ ಆಗ್ನೇಯ ಮೂಲೆಗೆ ಹೋಗುತ್ತದೆ; ತರುವಾಯ ಸರ್ವೆ ನಂಬರು 64 ಮತ್ತು 65, 66ರ ಪೂರ್ವ ಪಾರ್ಶ್ವದ ಉದ್ದಕ್ಕೂ ಆಜ್ಜೈರ್ ಸರ್ವೆ ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ; ತರುವಾಯ ಪಲಾಲಿ ಗ್ರಾಮದ ಸರ್ವೆ ನಂಬರು 4ರ ಪೂರ್ವ ಪಾರ್ಶ್ವದ ಉದ್ದಕ್ಕೂ ಮತ್ತು ಸರ್ವೆ ನಂಬರು 4, 86, 84, 82, 72 ಮತ್ತು 71ರ ಉತ್ತರ ಪಾರ್ಶ್ವದ ಉದ್ದಕ್ಕೂ ಸದರಿ ಪಲಾಲಿ ಗ್ರಾಮದ ಆಜ್ಜೈರ್ ಸರ್ವೆ ನಂಬರು 71ರ ಉತ್ತರ ದಿಕ್ಕಿನ ಮೂಲೆಯನ್ನು ಸೇರುತ್ತದೆ. ತರುವಾಯ ವೀರಸೋಮಗೆತಿಹಳ್ಳಿ ಪೂರ್ವದಿಕ್ಕಿನ ಗಡಿ ಮಾರ್ಗವಾಗಿ ಹೊರಟ ಸ್ಥಳವನ್ನು ಸೇರುತ್ತದೆ.

ಲಕ್ಕೇನಹಳ್ಳಿ ಗ್ರಾಮದ 1, 2, 4, 5, 6, 7, 14, 15, 16, 17, 18, 19, 20, 21, 22, 23, 24, 34, 35, 49, 51, 52, 54, 55 ಮತ್ತು 56 ಸರ್ವೆ ನಂಬರುಗಳು ಫಾರೆಸ್ಟಿನೊಳಗೆ ಹಿಡುವಳಿ ನಂಬರುಗಳಾಗಿರುವುದರಿಂದ ಪ್ರದೇಶವು (Enclosures) ಆವರಣವಾಗಿ ಎಣಿಸಲ್ಪಟ್ಟಿದೆ.

2. ಸದರಿ ಜಂಗಲಿಯನ್ನು ಸ್ಟೇಟ್ ಫಾರಸ್ಟು ಮಾಡುವದಕ್ಕೆ ಮುಂಚೆ ಇಸ್ತಿಹಾರ್ನಾವು ಪ್ರಸಿದ್ಧಪಡಿಸಿದ ತಾರೀಖಿಗೂ ಮತ್ತು ಪ್ರಸಿದ್ಧಪತ್ರಿಕೆ ಫಾಯಿಷ್ ಆಗುವದಕ್ಕೂ ಮಧ್ಯಕಾಲದಲ್ಲಿ ಸದರಿ ಇಸ್ತಿಹಾರ್ನಾದಲ್ಲಿ ನಮೂದಿಸಿರುವ ಜಮೀನುಗಳ ಮೇಲೆ, ಅಥವಾ ಜಮೀನಿನಲ್ಲಿ ವಾರಸೀಹಕ್ಕಿನಿಂದಾಗಲಿ ಅಥವಾ ಸರ್ಕಾರದಿಂದ ಅಥವಾ ಸದರೀ ಪ್ರಸಿದ್ಧಪತ್ರಿಕೆ ಫಾಯಿಷ್ಮಾಡಿದಾಗ ಇಂಥಾ ಹಕ್ಕುಗಳನ್ನುಂಟುಮಾಡುವದಕ್ಕೆ ಅಧಿಕಾರವನ್ನು ವಹಿಸಿದ ಮನುಷ್ಯನಿಂದಲಾಗಲಿ ಬಂದ ಹಕ್ಕುಗಳ ವಿನಹಾ ಇತರ ಯಾವ ತರಹಾವಾದ ಹಕ್ಕು ಬಾಧ್ಯತೆಗಳು ಹುಟ್ಟಲಾರವು. ಸದರೀ ಜಮೀನಿನಲ್ಲಿ ಹೊಸಮನೆಯನ್ನು ಕಟ್ಟಕೂಡದು, ಪ್ಲಾಟೇಷ್ ಮಾಡಕೂಡದು, ಸಾಗುವಳಿಗೋಸ್ಕರವಾಗಲೀ, ಇನ್ಯಾವದಕ್ಕೋಸ್ಕರವಾಗಲೀ ಹೊಸದಾಗಿ ಕತರಾವಣೆ ಮಾಡಕೂಡದು. ರೆಗ್ಯುಲೇಷನ್ನಿನಲ್ಲಿ ವಿಧಾಯಕವಾದ ಪ್ರಕಾರವಲ್ಲದೆ ವ್ಯಾಪಾರ ಅಥವಾ ಸಾಮಾನು ತಯಾರಿಗೋಸ್ಕರ ಗಿಡಗಳ್ಯಾವದನ್ನೂ ಕಡಿಯು ಕೂಡದು, ಸದರಿ ಜಮೀನಿನಲ್ಲಿ ಮುಂಚಿತವಾಗಿ ಸರ್ಕಾರದಿಂದ ಅಪ್ಪಣೆ ಪಡಿಪುದೇನೆ ಇಂಥಾ ಜಮೀನು ವಿಷಯದಲ್ಲಿ ಹಿಡುವಳೀ ಹಕ್ಕನ್ನುಂಟುಮಾಡಕೂಡದು. ಮತ್ತು ಅಂಥಾ ಅಪ್ಪಣೆ ಇಲ್ಲದ ಕೊಟ್ಟ ಹಿಡುವಳೀ ಹಕ್ಕು ಅಸಿದ್ಧವಾಗಿರುವದು.

3. ಸದರೀ ಜಮೀನು ಸ್ಟೇಟ್ ಫಾರಸ್ಟು ಮಾಡಿದ ತರುವಾಯ, ಅದರಲ್ಲಿ,

(a) ಅತಿಕ್ರಮ ಪ್ರವೇಶ, ದನ ಕರುಗಳನ್ನು ಮೇಯಿಸುವದು, ದನ ಕರುಗಳನ್ನು ಸ್ಟೇಟ್ ಫಾರೆಸ್ಟಿನಲ್ಲಿ ಹೋಗಲು ಆಸ್ಪದ ಕೊಡುವದು.

(b) ಯಾವ ಗಿಡವನ್ನಾದರೂ ಕಡಿಯಕೂಡದು, ಅಥವಾ ಯಾವ ಮರಮುಟ್ಟನ್ನು ಕತರಾಯಿಸುವದು ಅಥವಾ ಎಳೆಯುವದರಲ್ಲಿ ಅಸಡ್ಡೆಯಿಂದ ಯಾವ ನಷ್ಟವನ್ನಾದರೂ ಉಂಟುಮಾಡುವದು ಅಥವಾ ಯಾವ ಗಿಡದ್ದಾದರೂ ಯಾವ ಪೊದೆದಾದರೂ ಚಕ್ಕೆ, ಅಥವಾ ಎಲೆಗಳನ್ನು ಕಿತ್ತುಹಾಕುವದು.

(c) ನೀರಿಗೆ ವಿಷ ಹಾಕುವದು, ನೀರಿನಲ್ಲಿ ಡೈನಾಮಿಟ್ ಸುಡುವದು, ಅಥವಾ ಸರ್ಕಾರದಿಂದ ಆಗಿರುವ ಯಾವದಾದರೂ ನಿಬಂಧನೆಗಳಿಗೆ ವಿರೋಧವಾಗಿ ಬೇಟೆ ಆಡುವದು, ಬಂದೂಕಿನಿಂದ ಸುಡುವದು, ಮೀನು ಹಿಡಿಯುವದು, ಅಥವಾ ಬೋನುಗಳನ್ನು ಬಲೆಗಳನ್ನು ಹಾಕುವದು, ಇವುಗಳೆಲ್ಲಾ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಗಳಾಗಿವೆ. ಮತ್ತು ಸದರೀ ಸ್ಟೇಟ್ ಫಾರೆಸ್ಟಿನಲ್ಲಿ ಇದರಿಂದೀ ಕಂಡ ಕೆಲಸಗಳನ್ನು ಮಾಡುವವರು ಆರು ತಿಂಗಳ ಸಜಾ, ಅಥವಾ 500 ರೂಪಾಯಿಗಳ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಸ್ಥರಾಗಿರುತ್ತಾರೆ.

(d) 6ನೆ ಪ್ರಕರಣದಿಂದ ನಿರೋಧಿಸಿರುವ ಯಾವದಾದರೂ ಹೊಸ ಜಂಗಲ್ ಕತರಾವಣೆ.

(b) ಜಂಗಲಿಗೆ ಬೆಂಕಿ ಹಚ್ಚುವದು ಅಥವಾ ಸರ್ಕಾರದ ನಿಬಂಧನೆಗಳಿಗೆ ವಿರೋಧವಾಗಿ ಅಂಥಾ ಸ್ಟೇಟ್ ಫಾರೆಸ್ಟಿಗೆ ಬಾಧಕ ಉಂಟಾಗುವ ಹಾಗೆ ಬೆಂಕಿಯನ್ನು ಉರಿಸುವದು, ಅಥವಾ ಅಂಥಾ ಉಂಟುಮಾಡಿದ ಉರಿಯನ್ನು ಆರಿಸದೇ ಇರುವದು.

(c) ಈ ಬಗ್ಯಾಗಿ ಕ್ರಮವಾಗಿ ಅಧಿಕಾರಹೊಂದಿದ ಫಾರೆಸ್ಟು ಆಫಿಸರು ಆಗಿಂದಾಗ್ಗೆ ಪ್ರಕಟಿಸುವ ನಿಬಂಧನೆಗಳಿಗೆ ವಿರೋಧವಾಗಿ ವಿಧಿತವಾದ ಕಾಲ ಮತ್ತು ಕ್ರಮಗಳಲ್ಲದೆ, ಬೆಂಕಿಯನ್ನು ಹಚ್ಚುವದು, ಇಡುವದು, ಮತ್ತು ತಗದುಕೊಂಡು ಹೋಗುವದು.

(d) ಯಾವ ಗಿಡವನ್ನಾಗಲಿ ಕಡಿಯುವದು, (ಕತರಾಯಿಸುವದು) ಅದರ ಮಧ್ಯೆ ಸ್ಥಳತ್ಯಾಗ ಮಾಡುವದು, ಗುರ್ತು ಹಾಕುವದು, ಸವರುವದು, ತೂತು ಹಾಕುವದು, ಬೆಂಕಿಯಿಂದ ಅಥವಾ ಅನ್ಯಥಾ ಹಾನಿಗೊಳಿಸುವದು.

(e) ಬಂಡೆಯಿಂದ ಕಲ್ಲು ತೆಗೆಯುವದು, ಸುಣ್ಣ ಅಥವಾ ಇದ್ದಲು ಸುಡುವದು, ಅಥವಾ ಯಾವ ಫಾರೆಸ್ಟು ಉತ್ಪತ್ತಿಯನ್ನಾದರೂ ಜಪ್ತಾಯಿಸುವದು, ಯಾವದಾದರೂ ಸಾಮಾನು ತಯಾರೀ ಕೆಲಸಕ್ಕೆ ಒಳಪಡಿಸುವದು, ಅಥವಾ ಸಾಗಿಸುವದು.

(f) ಸಾಗುವಳೀಗಾಗಲಿ, ಅಥವಾ ಇನ್ಯಾವ ಕೆಲಸಕ್ಕಾಗಲೀ ಯಾವ ಜಮೀನನ್ನಾಗಲಿ ಹಸನ ಮಾಡುವದು ಅಥವಾ ಉತ್ತುವದು.

4. ಈ ಪ್ರಸಿದ್ಧಪತ್ರಿಕೆ ಫಾಯಿಷಾಗುವ ತಾರೀಖು ಲಾಗಾಯಿತ್ತು ಮೂರು ತಿಂಗಳೊಳಗಾಗಿ ಅಂಥಾ ಸರಹದ್ದಿನೊಳಗಿರುವ ಯಾವ ಜಮೀನಿನಲ್ಲಿ ಅಥವಾ ಜಮೀನುಮೇಲಾದರೂ ಅಥವಾ ಅಂಥಾ ಜಮೀನಿನ ಫಾರೆಸ್ಟು ಉತ್ಪತ್ತಿಗಳಾಗಲೀ ಯಾರಿಗಾದರೂ ಹಕ್ಕು ಇದೆ ಅಥವಾ ಉಂಟು ಎಂತ ಹೇಳುವದು, ಅಂಥಾ ಪ್ರತಿ ಬಂದು ಹಕ್ಕಿನ ಸ್ವಭಾವವನ್ನು ಹಕ್ಕು ಎಷ್ಟರಮಟ್ಟಿಗೆ ಇದೆ ಯನ್ನತಕ್ಕಂಥಾ ವ್ಯಾಪ್ತಿಯನ್ನು ನಮೂದು ಮಾಡಿ ಲಿಖಿತ ಮೂಲಕವಾಗಲೀ, ಅಥವಾ ರೂಬರೂಬಾಗಲೀ, ತಿಳಿಯಪಡಿಸಬೇಕಲ್ಲದೆ ಹಕ್ಕು ದಾರೀಗೆ ಬಲೀಯವಾದ ದಸ್ತಾವೇಜುಗಳನ್ನು ಹಾಜರ್ಮಾಡಬೇಕು.

ಸಿ. ಎಂ. ಶಾಮರಾವ್,
ಮೈಸೂರು ಸೀಮೆಯ ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸರ್.